ತಡವರಿಸಿಕೊಂಡು ಮಂಡ್ಯ ಡಿಸ್ಟ್ರಿಕ್ಟ್, ನಾಗಮಂಗಲ ತಾಲ್ಲೋಕ್ ಎಂದು ಅಲ್ಲಿಯವರೆಗೆ ವ್ಯಂಜನಾಂತ್ಯವಾಗಿ ಉಚ್ಚರಿಸಿ ಬಚಾವಾದ. "ಇಲ್ಲಿ ಯಾವ ಬಂಧುಗಳ ಮನೆಯಲ್ಲಿ ಉಳಿದುಕೊಂಡಿದ್ದೀರಿ?'' ಅಂತ ಮತ್ತೊಂದು ಯಡವಟ್ಟಿನ ಪ್ರಶ್ನೆ ಬಂದಾಗ, "ಇನ್ ಮೈ ಫಾದರ್ ಇನ್ ಲಾ ಹೌಸ್" ಎಂದು ಠೀಕಾಗಿ ಉತ್ತರಿಸಿಬಿಟ್ಟ. ತರಗತಿಗೆ ಮತ್ತಷ್ಟು ಬೆರಗು. ಪ್ರಶ್ನೆಗಳು ಮತ್ತಷ್ಟು ಹೆಚ್ಚಿದವು.

"ವಾಟ್? ಫಾದರ್–ಇನ್–ಲಾ? ಆರ್ ಯು ಮ್ಯಾರೀಡ್?" ಚೋಟುದ್ದ ನಿಂತಿದ್ದ ದೇವರಾಜನನ್ನು ಮಾಸ್ತರು ನೆತ್ತಿಯಿಂದ ಕಾಲಿನ ತನಕ ವೀಕ್ಷಿಸಿದರು. ಇಡೀ ತರಗತಿ ಕಣ್ಣಲ್ಲಿ ಕಣ್ಣಿಟ್ಟು ದೇವರಾಜನನ್ನು ದುರುಗುಟ್ಟಿಕೊಂಡು ನೋಡಿತು. ದೇವರಾಜ ತಡವರಿಸಿ, "ಅದೇ ಸಾರ್... ಫಾದರ್ ಇನ್ ಲಾ... ನಮ್ಮ ಅಕ್ಕನ ಗಂಡ..." ಎನ್ನುತ್ತಿದ್ದಂತೆ ಎಲ್ಲರೂ ಹೋ ಎಂದು ನಕ್ಕರು. ಮಾಸ್ತರು ನಗು ತಡೆದುಕೊಂಡು ಕೊಂಚ ಸಹಾನುಭೂತಿಯಿಂದ ಕನ್ನಡದಲ್ಲಿಯೇ ಫಾದರ್ ಇನ್ ಲಾ ಅಂದರೆ ಮಾವ, ಬ್ರದರ್ ಇನ್ ಲಾ ಎಂದರೆ ಭಾವ ಎಂದು ತಿದ್ದಿ ಹೇಳಿಕೊಟ್ಟರು. ಫಾದರ್ ಇನ್ ಲಾ ಎಂದರೆ ಭಾವ ಅಂತ ಹೇಳಿಕೊಟ್ಟಿದ್ದ ಪುರದ ನಂಜಪ್ಪ ಮಾಸ್ತರ ಮೇಲೆ ಹಲ್ಲು ಹಲ್ಲು ಕಡಿದು ದೇವರಾಜ ಉಗುಳು ನುಂಗಿಕೊಂಡ.

★★★

ಭಾವನ ಬಳಿ ಸೈಕಲ್ ಇತ್ತು. ಅದೂ ಮಲೆನಾಡಿನ ಸೈಕಲ್ಲೇ. ವಿಚಿತ್ರವಾಗಿತ್ತು. ಸ್ಟ್ಯಾಂಡು ಹಿಂದಕ್ಕಿರದೆ ಪಕ್ಕಕ್ಕಿತ್ತು. ಸದಾ ಮಳೆಯಲ್ಲಿ ನೆಂದು ಸೊರ್ರೋ ಶಬ್ದ ಬರುತ್ತಿತ್ತು. ಅಕ್ಕನಿಗೆ ಹೇಳಿ ಹೊರಗೆ ಹೊರಟ. ಮನೆ ಸಬ್‌ಜೈಲ್ ರಸ್ತೆಯಲ್ಲಿತ್ತು. ತುಸು ಹತ್ತಿರದ ಕೋಡಿಭಾಗ್ ರಸ್ತೆಯಲ್ಲಿಯೇ ಕಾಲೇಜು. ಜೂನ್ ತಿಂಗಳಾದ್ದರಿಂದ ಮಳೆ ಸತತವಾಗಿ ಸುರಿಯುತ್ತಿತ್ತು. ಒಂದು ಗಂಟೆ ಬಿಡುವು ಕೊಡುತ್ತಿತ್ತು. ಮರುಕ್ಷಣ ಭೂಮಿಯ ತೇವ ಆರಿ ಹೋಗುತ್ತಿತ್ತು. ಎಲ್ಲರ ಬಳಿಯಲ್ಲಿಯೂ ಕೊಡೆಗಳು. ದೇವರಾಜನಿಗೆ ಮಳೆ ಎಂದರೆ ವಿಪರೀತ ಪ್ರೀತಿ. ಅಕ್ಕ ಹೇಳಿದರೂ ಕೇಳದೆ ಕೊಡೆಯನ್ನು ತೆಗೆದುಕೊಳ್ಳದೆ ಸೈಕಲ್ಲೇರಿ ಸಬ್‌ಜೈಲ್ ರಸ್ತೆಯಲ್ಲಿ ಹೊರಟ.

ದೇವರಾಜ ಗರಿ ಬಿಚ್ಚಿಕೊಂಡ. ನಿಧಾನಕ್ಕೆ ಸೈಕಲ್ಲು ತುಳಿಯುತ್ತಾ ಎಡಬಲಗಳನ್ನು ವೀಕ್ಷಿಸುತ್ತಾ ಜಿಡಿ ಮಳೆಯಲ್ಲಿ ನೆನೆಯುತ್ತಾ ಖುಷಿಗೆ ಸಣ್ಣದಾಗಿ ಶಿಳ್ಳೆ ಹಾಕುತ್ತಾ ಸಾಗಿದ. ಸಮುದ್ರದ ಮೊರೆತ ಹಿತವಾಗಿತ್ತು. ಎಡದಂಡೆಗೆ ಪೂರ್ಣ ಸರಕಾರೀ ಕಚೇರಿಗಳಿದ್ದವು. ಜೋರು ಮಳೆಗೆ ಗೋಡೆ ಕುಸಿಯದಂತೆ ಮರೆಮಾಡಿ ಇರಿಚಲು ಹೊಡೆಯದಂತೆ ಸೋಗೆಯನ್ನು ಇಳಿಬಿಟ್ಟು ಕಟ್ಟಡದ ಅಲಂಕಾರವನ್ನೆಲ್ಲಾ ಹಾಳು ಮಾಡಿದ್ದರು. ಕಾಂಪೌಂಡು ಕಟ್ಟಲು ಅದೆಂಥದೋ ಭಾರಿ ಕೆಂಪು ಇಟ್ಟಿಗೆ–ಸೈಜುಗಲ್ಲಿನಂತಹವು – ಬಳಸಿದ್ದರು. ಅವುಗಳ ಸಂದಿಯಲ್ಲೆಲ್ಲಾ ಹಸಿರು ಹುಲ್ಲು ಬೆಳೆದಿತ್ತು. ತನ್ನೂರು ನೆನಪಾಯ್ತು. ಮುಂಗಾರು ಮಳೆಗಾಗಿ ಊರೆಲ್ಲಾ ಕಾದು ಕೂರುತ್ತಿದ್ದರು. ಮಳೆ ಬಿದ್ದ ದಿನ ಹೊನ್ನಾರು ಕಟ್ಟಿ ಊರ ಸುತ್ತಾ ಉತ್ತು ಬಿತ್ತಿ ಪ್ರತೀ ಮಳೆಗೆ ಆಕಾಶ ನೋಡುತ್ತಿದ್ದರು. ಇಲ್ಲಿ ಆಕಾಶ ನೋಡುವಂತೆಯೇ ಇಲ್ಲ. ದರಿದ್ರದ ಮಳೆ ಬಟ್ಟೆ ಒಣಗಿಸಲೂ ಬಿಡುವುದಿಲ್ಲ. ಎಲ್ಲರ ಕೈನಲ್ಲೂ ಕೊಡೆ. ನಮ್ಮ ಕಡೆ ಕೊಡೇನ ಬಿಸಿಲಿಗೆ ಹಿಡೀತಾರೆ. ಇಲ್ಲಿ ಬರೀ ಮಳೆಗೆ – ಎದುರಿನಿಂದ ಕೋಡಿಭಾಗದ ಸಿಟಿ ಬಸ್ಸು ಜೋರಾಗಿ ನುಗ್ಗಿದಾಗಲೇ ದೇವರಾಜನಿಗೆ ಎಚ್ಚರವಾದದ್ದು.

ಬಸ್ಸೇನೋ ಮುಖಕ್ಕೆ ನೀರು ಹಾರಿಸಿ ಹೊರಟುಹೋಯಿತು. ದೇವರಾಜ ಕಲ್ಪನೆಯ ರಾಜ್ಯದಲ್ಲಿದ್ದವನು ಸೈಕಲ್ಲಿನ ಹ್ಯಾಂಡಲಿನ ಮೇಲಿನ ಹಿಡಿತವನ್ನು ಸಡಿಲ ಮಾಡಿದ್ದರಿಂದ ಬಲಕ್ಕೆ